ಡಿ-72-26

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಯು.ಬಿ.ವೆಂಕಟೇಶ ರವರು ನಿಯಮ 72 ರಡಿ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸಂಬಂಧಿಸಿದ ಮಾಹಿತಿ

**ವಿಷಯ: ರಾಜ್ಯದಲ್ಲಿ ಅನುಚ್ಛೇದ 371(ಜೆ) ಜಾರಿಗೆ ಬರುವುದಕ್ಕೂ ಮುನ್ನ ಇದ್ದಂತಹ ಸ್ಥಿತಿ, ಜಾರಿಗೆ ಬಂದ ನಂತರ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಗಿರುವ ಬೆಳವಣಿಗೆಗಳು, ಆಗಬೇಕಾದ ಅಭಿವೃದ್ಧಿ ಯೋಜನೆಗಳು, ನೆನೆಗುದಿಗೆ ಬಿದ್ದಿರುವ ಯೋಜನೆಗಳು ಸೇರಿದಂತೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಈ ಭಾಗದ ಅಭಿವೃದ್ಧಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಲು ಬಯಸುತ್ತೇನೆ:**

**ಉತ್ತರ:** ಭಾರತದ ಸಂವಿಧಾನಕ್ಕೆ ಅನುಚ್ಛೇದ 371(ಜೆ) ಸೇರ್ಪಡೆಯಿಂದ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ

ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶವು ರಾಜ್ಯದ ಈಶಾನ್ಯ ಭಾಗದಲ್ಲಿ ಸ್ಥಾಪಿಸಲ್ಪಟ್ಟಿದೆ. ಕನ್ನಡ ಭಾಷೆಯನ್ನು ಮಾತನಾಡುವ ಜನರಿಂದ ಆವೃತವಾಗಿರುವ ಈ ಪ್ರದೇಶವು 1948ರ ವರೆಗೆ ಹೈದ್ರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಇತ್ತು. ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಿದ ನಂತರ ಈ ಪ್ರದೇಶವು 1956ರ ವರೆಗೆ ಹೈದ್ರಾಬಾದ್ ರಾಜ್ಯದ ಭಾಗವಾಗಿತ್ತು. ಹೈದ್ರಾಬಾದ್-ಕರ್ನಾಟಕ ಪ್ರದೇಶವು ಬೀದರ್, ಯಾದಗಿರ್, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಕಲ್ಯಾಣ (ಹೈದ್ರಾಬಾದ್) -ಕರ್ನಾಟಕ ಪ್ರದೇಶವು ರಾಷ್ಟ್ರದ ಎರಡನೇ ಅತಿ ದೊಡ್ಡ ಶುಷ್ಕ ಪ್ರದೇಶವಾಗಿರುತ್ತದೆ.

**ಅನುಚ್ಛೇದ 371(ಜೆ) ಜಾರಿಗೆ ಬರುವುದಕ್ಕೆ ಮುನ್ನ ಇದ್ದಂತಹ ಸ್ಥಿತಿ**

ಮಂಡಳಿಯ ಸ್ಥಾಪನೆಯ ಪೂರ್ವದಲ್ಲಿ 1980ರಲ್ಲಿ ಪ್ರಾದೇಶಿಕ ಅಸಮತೋಲನೆಯನ್ನು ಹೊಗಲಾಡಿಸುವ ಉದ್ದೇಶಕ್ಕಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳ(ಹೆಚ್‌ಕೆಎಡಿಬಿ) ದಿ:10.03.1992ರಿಂದ ಕಲಬುರಗಿಯಲ್ಲಿ ಪ್ರಾರಂಭಿಸಲಾಯಿತು. ಈ ಮಂಡಳಿಯು 1990-91ರಿಂದ 2013-14ರ ವರೆಗೆ (ಹೆಚ್‌ಕೆಆರ್‌ಡಿಬಿ) ಸ್ಥಾಪನೆ ಆಗುವವರೆಗೆ 1039.17 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ, ಅದರಲ್ಲಿ ರೂ. 979.32 ಕೋಟಿ ಖರ್ಚು ಮಾಡಿ ಒಟ್ಟು- 23,564 ಕಾಮಗಾಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ.

ರಸ್ತೆ ಮತ್ತು ಸೇತುವೆ (ಮಂಡಳಿಯಿಂದ) ವಲಯದಲ್ಲಿ 11573, ರಸ್ತೆ ಮತ್ತು ನಬಾರ್ಡ ಅನುದಾನದಲ್ಲಿ ಒಟ್ಟು-237, ಆರೋಗ್ಯ ವಲಯದಲ್ಲಿ-215, ಶಿಕ್ಷಣ ವಲಯದಲ್ಲಿ -2469, ಸಣ್ಣ ನೀರಾವರಿ -730, ಕುಡಿಯುವ ನೀರು ಸರಬರಾಜು-879, ವಿದ್ಯುತೀಕರಣ-1138, ಸಮಾಜ ಕಲ್ಯಾಣ(ಸಮುದಾಯ ಭವನ, ಮಹಿಳಾ ಮಂಡಳ, ಯುವಕ ಮಂಡಳಿ, ಅಂಗನವಾಡಿ)-1433, ಇತರೆ(ಸಾರಿಗೆ ಭೂ ಅಂತರ್ಜಲ) ಕಾಮಗಾರಿ-4685 ಹಾಗೂ ಅರಣ್ಯ-179 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಇವುಗಳಲ್ಲಿ ಪ್ರಮುಖವಾಗಿ ಚಿತ್ತಾಪೂರ ತಾಲೂಕಿನ ರೈಲ್ವೆ ಕೆಳ ಸೇತುವೆ, ಗುಲಬರ್ಗಾ ನಗರದಲ್ಲಿ ಕನ್ನಡ ಭವನ, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ದೂರಸಂವೇದಿ ಉಪಕೇಂದ್ರ, ಮಹಿಳಾ ವಸತಿ ನಿಲಯ, ಗುಲಬರ್ಗಾ ನಗರದಲ್ಲಿ ರೈಲ್ವೆ ಕೆಳ ಸೇತುವೆ ನಿರ್ಮಾಣ, ಪದವಿ ಮಹಾವಿದ್ಯಾಲಯಗಳು, ಹೈ.ಕ.ಪ್ರ ಮಂಡಳಿಯು ಗುಲಬರ್ಗಾ ವಿಶ್ಯವಿದ್ಯಾಲಯದ ಸಹಯೋಗದೊಂದಿಗೆ ಹೈಕಪ್ರ ಕೇಂದ್ರವನ್ನು ರಚಿಸಿ ಈ ಭಾಗದ ಅಭಿವೃದ್ಧಿಗಾಗಿ ವಿವಿಧ ಕೋಶಗಳಾದ ಕೃಷಿ ಅಭಿವೃದ್ಧಿ ಕೋಶ, ಕೃಷಿ ತರಬೇತಿ ಹಾಗೂ ಪೂರಕ ಸೇವೆಗಳ ಕೋಶ, ಭೂ ಹಾಗೂ ನೀರು ನಿರ್ವಹಣೆ ಕೋಶ, ಮಹಿಳಾ ಅಭಿವೃದ್ಧಿ ಕೋಶ, ಆರೋಗ್ಯ ಸುಧಾರಣೆಯ ಕೋಶ, ಶಿಕ್ಷಣ ಸುಧಾರಣೆಯ ಕೋಶ, ಸಾಂಸ್ಕೃತಿ ಹಾಗೂ ಪ್ರವಾಸೋಧ್ಯಮ ಕೋಶ, ಸಂಪರ್ಕ ಜಾಲ ಕೋಶ, ಉಸ್ತುವಾರಿ ಹಾಗೂ ಮೌಲ್ಯಮಾಪನ ಕೋಶ ರಚಿಸಿ ಅನೇಕ ತರಬೇತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ.

**ಅನುಚ್ಛೇದ 371(ಜೆ) ಜಾರಿಗೆ ಬಂದ ನಂತರ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಗಿರುವ ಬೆಳವಣಿಗೆ**

ಸಂವಿಧಾನದ ಅನುಚ್ಛೇದ 371(ಜೆ) ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಹಿಂದುಳಿದ ಆರು ಜಿಲ್ಲೆಗಳಿಗೆ ಈ ಕೆಳಕಂಡ ಅಂಶಗಳನ್ನೊಳಗೊಂಡ ಒಂದು ವಿಶೇಷ ಸ್ಥಾನಮಾನವನ್ನು ಕಲ್ಪಸಲಾಗಿರುತ್ತದೆ.

1. ಒಂದು ಪ್ರತ್ಯೇಕ ಅಭಿವೃಧ್ಧಿ ಮಂಡಳಿಯನ್ನು ಸ್ಥಾಪಿಸಲು
2. ಪ್ರದೇಶದ ಅಭಿವೃದ್ಧಿಗೆ ಸಾಕಷ್ಟು ಅನುದಾನದ ಹಂಚಿಕೆಯನ್ನು ಮಂಡಳಿಯು ಖಚಿತಪಡಿಸಿಕೊಳ್ಳುವುದು
3. ಶಿಕ್ಷಣ ಹಾಗೂ ಸರ್ಕಾರಿ ನೌಕರಿಯಲ್ಲಿ ಸ್ಥಳೀಯ ಮೀಸಲಾತಿ

ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ದಿನಾಂಕ 6ನೇ ನವೆಂಬರ್, 2013ರಂದು ಸ್ಥಾಪಿಸಲಾಯಿತು. 28

ಸದಸ್ಯರುಗಳನ್ನೊಳಗೊಂಡ ಮಂಡಳಿಯನ್ನು ದಿನಾಂಕ 23ನೇ ಜನವರಿ 2014ರಂದು ರಚಿಸಲಾಯಿತು.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 76 ಹೈಕಕೋ 2018, ಬೆಂಗಳೂರು, ದಿನಾಂಕ: 07.09.2019 ರಂದು ಹೈದ್ರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಹೆಸರನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಎಂದು ಮರುನಾಮಕರಣಗೊಳಿಸಿದೆ.

ಕಲ್ಯಾಣ (ಹೈದ್ರಾಬಾದ್)–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಪ್ರತಿಶತ 70 ರಷ್ಟು ಅನುದಾನವನ್ನು ಮೂಲಭೂತ ಸೌಕರ್ಯಗಳ ಅಂತರಗಳಿಗೆ ಹಾಗೂ ಪ್ರತಿಶತ 30 ರಷ್ಟು ಅನುದಾನವನ್ನು ಸಾಂಸ್ಥಿಕ ಅಂತರಗಳಿಗೆ ನಿಗದಿಪಡಿಸಿದೆ. ಆಡಳಿತಾತ್ಮಕ ವೆಚ್ಚವನ್ನು ಸಾಂಸ್ಥಿಕ ವಲಯದ ಪಾಲಿನ ಪ್ರತಿಶತ 4ರಷ್ಟು ಅನುದಾನದಿಂದ ಭರಿಸಲು ಮುಂದುವರೆಸಲಾಗಿದೆ.

**ಕಲ್ಯಾಣ (ಹೈದ್ರಾಬಾದ್) –ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಗತಿ**

| ಕ್ರಮ ಸಂಖ್ಯೆ | ವರ್ಷ | ಆರ್ಥಿಕ (ರೂ.ಕೋಟಿಗಳಲ್ಲಿ) | | | ಭೌತಿಕ (ಕಾಮಗಾರಿಗಳು ಸಂಖ್ಯೆಗಳಲ್ಲಿ) | |
|---|---|---|---|---|---|---|
| | | ಮಂಜೂರಾದ ಅನುದಾನದ | ಬಿಡುಗಡೆಯಾದ ಅನುದಾನ | ವೆಚ್ಚ | ಮಂಜೂರಾದ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು |
| 1 | 2013-14 | 153.50 | 30 | 107.71 | 597 | 597 |
| 2 | 2014-15 | 600 | 300 | 636.84 | 1857 | 1816 |
| 3 | 2015-16 | 1000 | 750 | 841.08 | 3279 | 3135 |
| 4 | 2016-17 | 1000 | 750 | 830.67 | 2909 | 2774 |
| 5 | 2017-18 | 1000 | 800 | 972.75 | 4413 | 3819 |
| 6 | 2018-19 | 1000 | 1000 | 413.93 | 4160 | 1869 |
| 7 | 2019-20 (ಜನವರಿ- 2020ವರೆಗೆ) | 1500 | 1125 | 101.78 | 3881 | 93 |
| ಒಟ್ಟು | | 6253.50 | 4755 | 3904.76 | 21096 | 14103 |

ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವಲಯವಾರು 2013-14 ರಿಂದ ಭೌತಿಕ ಮತ್ತು ಆರ್ಥಿಕ (ಜನವರಿ-2020 ಅಂತ್ಯದವರೆಗೆ) ಪ್ರಗತಿ

| ಕ್ರಮ ಸಂಖ್ಯೆ | ವಲಯ | ಆರ್ಥಿಕ (ರೂ.ಕೋಟಿಗಳಲ್ಲಿ) | | ಭೌತಿಕ (ಕಾಮಗಾರಿಗಳು ಸಂಖ್ಯೆಗಳಲ್ಲಿ) | |
|---|---|---|---|---|---|
| | | ಮಂಜೂರಾತಿಯಾದ ನಿವ್ವಳ ಅನುದಾನ | ವೆಚ್ಚ | ಮಂಜೂರಾದ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು |
| 1 | ಶಿಕ್ಷಣ | 1519.30 | 682.32 | 6737 | 3133 |
| 2 | ಆರೋಗ್ಯ | 316.53 | 182.95 | 1110 | 682 |
| 3 | ಸಾಮಾಜಿಕ | 253.35 | 128.90 | 835 | 672 |
| 4 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಲಯ | 86.94 | 50.43 | 512 | 355 |
| 5 | ರಸ್ತೆ ಮತ್ತು ಸೇತುವೆ | 3650.12 | 2375.36 | 9216 | 7268 |
| 6 | ಶೌಚಾಲಯ | 43.22 | 35.99 | 468 | 418 |
| 7 | ನೀರು ಸರಬರಾಜು | 216.52 | 102.31 | 1482 | 1090 |
| 8 | ನೀರಾವರಿ | 15.21 | 11.30 | 28 | 25 |
| 9 | ಇತರೆ ಅಭಿವೃದ್ಧಿ ಕಾರ್ಯಕ್ರಮಗಳು | 484.10 | 335.21 | 708 | 460 |
| | ಒಟ್ಟು | **6585.29** | **3904.76** | **21096** | **14103** |

ಮೇಲ್ಕಂಡ ಅನುದಾನದ ಜೊತೆಗೆ ಡಾ|| ಡಿ.ಎಂ. ನಂಜುಂಡಪ್ಪ, ವಿಶೇಷಾಭಿವೃದ್ಧಿ ಯೋಜನೆಯಡಿ ಪ್ರತಿ ವರ್ಷ ನಿಗದಿಯಾಗುವ ಅನುದಾನದಲ್ಲಿ ಕಲಬುರಗಿ ವಿಭಾಗಕ್ಕೆ ಶೇ.40 ರಷ್ಟು ಅನುದಾನವನ್ನು ನಿಗದಿಪಡಿಸಿ ಅನುಷ್ಠಾನಗೊಳಸಲು ಸಂಬಂಧಿಸಿದ ಇಲಾಖೆಗಳ ಕ್ರಿಯಾ ಯೋಜನೆಯಗಳನ್ನು ಅನುಮೋದಿಸಿ, ಕ್ರಮವಹಿಸಲಾಗಿರುತ್ತದೆ. ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ:-

(ರೂ.ಕೋಟಿಗಳಲ್ಲಿ)

| | ಬಿಡುಗಡೆಯಾದ ಅನುದಾನ | ವೆಚ್ಚವಾಗಿರುವ ಅನುದಾನ |
|---|---|---|
| 2007-08ನೇ ಸಾಲಿನಿಂದ 2019-20ನೇ ಸಾಲಿನಿಂದ (ಫೆಬ್ರವರಿ-2020ರವರೆಗೆ) | 8002.91 | 7507.64 |

## ಆಗಬೇಕಾದ ಅಭಿವೃದ್ಧಿ ಯೋಜನೆಗಳು

ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯ ಅಂತರವನ್ನು ಕಡಿಮೆಗೊಳಸುವ ನಿಟ್ಟಿನಲ್ಲಿ ಸರ್ಕಾರವು ಕಲ್ಯಾಣ (ಹೈದ್ರಾಬಾದ್)-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2019-20ನೇ ಸಾಲಿಗೂ ರೂ.1500.00 ಕೋಟಿಗಳ ಮಂಜೂರಾತಿಯನ್ನು ಮುಂದುವರೆಸಿದೆ. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳೊಂದಿಗೆ ಶಿಕ್ಷಣ, ಆರೋಗ್ಯ, ಪೌಷ್ಟಿಕಆಹಾರ, ಕೌಶಲ್ಯ ಅಭಿವೃದ್ಧಿ ಮುಂತಾದ ಚಟುವಟಿಕೆಗಳನ್ನೂ ಕೇಂದ್ರೀಕರಿಸುವ ಅವಶ್ಯಕತೆ ಇರುತ್ತದೆ. ಆದುದರಿಂದ ಪ್ರದೇಶದ ಸವಾಲುಗಳನ್ನು ಸ್ಪಂದಿಸಿ ಬೇಡಿಕೆಗಳಗನುಸಾರ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಬೇಕಾಗುತ್ತದೆ.

**ನೆನೆಗುದ್ದಿಗೆ ಬಿದ್ದಿರುವ ಯೋಜನೆಗಳು**

ಮಂಡಳಿಯ ಯಾವುದೇ ಕಾಮಗಾರಿಗಳು ನೆನೆಗುದ್ದಿಗೆ ಬಿದ್ದಿರುವುದಿಲ್ಲ ಹಾಗೂ ನಿರ್ಲಕ್ಷಕ್ಕೆ ಒಳಗಾಗಿರುವುದಿಲ್ಲ. ಕೆಲವೊಂದು ಕಾಮಗಾರಿಗಳು ವಿವಿಧ ಕಾರಣಗಳಿಂದ (ಸ್ಥಳದ ಸಮಸ್ಯೆ, ತಾಂತ್ರಿಕ ಸಮಸ್ಯೆ, ಇತ್ಯಾದಿ) ಪ್ರಾರಂಭವಾಗದ್ದಿದ್ದಲ್ಲಿ, ಅಂತಹ ಕಾಮಗಾರಿಗಳನ್ನು ರದ್ದುಪಡಿಸಿ ಹೊಸ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.

**ಮಂಡಳಿಯ ಕಾಮಗಾರಿಗಳು ಈ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿದ್ದು ಅವುಗಳಲ್ಲಿ ಪ್ರಮುಖವಾದ ಕೆಲವು ಯೋಜನೆಗಳಿಗೆ ನಿಗಧಿಪಡಿಸಿದ ಅನುದಾನ ವಿವಿರ ಕೆಳಕಂಡಂತಿದೆ.**

- ಕಲಬುರಗಿ ವಿಮಾನ ನಿಲ್ದಾಣ ಕಾಮಗಾರಿಗೆ ರೂ.58.52 ಕೋಟಿಗಳು.
- ಕೊಪ್ಪಳ ಜಿಲ್ಲೆಯ ತಳಕಲ್ ಇಂಜಿನಿಯರಿಂಗ್ ಕಾಲೇಜು ನಿರ್ಮಾಣಕ್ಕೆ ರೂ.50.00 ಕೋಟಿಗಳು.
- ಯಾದಗಿರಿ ಜಿಲ್ಲೆಯ ಕಡೇಚೂರು ಕೈಗಾರಿಕಾ ಅಭಿವೃದ್ಧಿ ಕಾಮಗಾರಿಗೆ ರೂ.10.00 ಕೋಟಿಗಳು.
- ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಬಾದನಳ್ಳಿ ದಿಂದ ಗೌಡಗಾಂವ ರಸ್ತೆ ಸುಧಾರಣೆ ಕಾಮಗಾರಿ ರೂ.9.91 ಕೋಟಿಗಳು.
- ಕಲಬುರಗಿ ಜಿಲ್ಲೆಯ ಮರತೂರು ಸ್ಟೇಷನ್ ದಿಂದ ಹಳೆ ಶಾಹಬಾದ ರಸ್ತೆ ವರೆಗೆ ರಸ್ತೆ ನಿರ್ಮಾಣಕ್ಕಾಗಿ ರೂ.9.90 ಕೋಟಿಗಳು.
- ಕಲಬುರಗಿ ನಗರದ ಅನ್ನಪೂರ್ಣ ಕ್ರಾಸ್ ದಿಂದ ಖರ್ಗೆ ಪೆಟ್ರೋಲ್ ಬಂಕ್ ಕಾಮಗಾರಿಗೆ ರೂ.9.62 ಕೋಟಿಗಳು.
- ಯಾದಗಿರಿ ಜಿಲ್ಲೆಯ ಸೈದಾಪುರದಿಂದ ಅಫಜಲಪುರ ರಸ್ತೆ ಕಾಮಗಾರಿಗೆ ರೂ.8.66 ಕೋಟಿಗಳು.
- ಕಲಬುರಗಿ ನಗರದ ಜೇವರ್ಗಿ ರಸ್ತೆ ಮೋಹನ ಲಾಡ್ಜ ದಿಂದ ರಾಮ ಮಂದಿರ ವರೆಗೆ ರಸ್ತೆ ನಿರ್ಮಾಣಕ್ಕಾಗಿ ರೂ.8.66 ಕೋಟಿಗಳು.
- ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಆಳಂದ ದಿಂದ ನಿಂಬರ್ಗಾ ವರೆಗೆ ರಸ್ತೆ ನಿರ್ಮಾಣಕ್ಕಾಗಿ ರೂ.8.48 ಕೋಟಿಗಳು.
- ರಾಯಚೂರು ಜಿಲ್ಲೆಯ ಅರಕೇರ – ಸಿರವಾರ ಮುಖ್ಯ ರಸ್ತೆಯಿಂದ ಜಾಡಲದಿನ್ನಿ, ತಿಪ್ಪಲದಿನ್ನಿ ಯಿಂದ ಸಿರವಾರ- ರಾಯಚೂರು ಮುಖ್ಯ ರಸ್ತೆ ವರೆಗೆ ಸಿ.ಡಿ. ಹಾಗೂ ರಸ್ತೆ ನಿರ್ಮಾಣಕ್ಕಾಗಿ ರೂ.8.00 ಕೋಟಿಗಳು.
- ಕಲಬುರಗಿ ನಗರದ ಜಯದೇವ ಸಂಸ್ಥೆಯ ಹೃದಯ ಕೇಂದ್ರಕ್ಕೆ ರೂ.6.00 ಕೋಟಿಗಳು.
- ಬಳ್ಳಾರಿ ಜಿಲ್ಲೆಯ ವಿಮ್ಸ್ (VIMS)ಗೆ ಎಂ.ಆರ್.ಐ. ಸ್ಕಾನಿಂಗ್ ಮಷೀನ್ ಉಪಕರಣಕ್ಕೆ ರೂ.6.00 ಕೋಟಿಗಳು.
- TALP ಯೋಜನೆಯಡಿಯಲ್ಲಿ ಕಲ್ಯಾಣ ಕರ್ನಾಟಕದ 06 ಜಿಲ್ಲೆಗಳ 718 ಪ್ರೌಢ ಶಾಲೆಗಳಿಗೆ ರೂ. 48.47 ಕೋಟಿ ಅನುದಾನದಲ್ಲಿ ಲ್ಯಾಪಟಾಪ್ ಎಲ್‌ಸಿಡಿ ಪ್ರೋಜೆಕ್ಟರ್, ಯುಪಿಎಸ್ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.
- 4387 ಹಿರಿಯ ಪ್ರಾಥಮಿಕ ಶಾಲೆ ಮತ್ತು 1130 ಪ್ರೌಢ ಶಾಲೆಗಳಿಗೆ ರೂ 5.29 ಕೋಟಿ ಅನುದಾನದಲ್ಲಿ ವಿಜ್ಞಾನ ಮತ್ತು ಗಣಿತ ಕಿಟ್ಟುಗಳನ್ನು ಒದಗಿಸಲಾಗುತ್ತಿದೆ.

- ಹೈದ್ರಾಬಾದ ಕರ್ನಾಟಕ ವಲಯದಲ್ಲಿ ಸ್ಥಾಪಿಸಲಾಗಿರುವ ಜಿಟಿಟಿಸಿ ಕೇಂದ್ರಗಳಾದ ಯಾದಗಿರಿ, ಹುಮನಾಬಾದ, ಲಿಂಗಸೂಗೂರು ಹಾಗೂ ಹೊಸಪೇಟೆಗಳಲ್ಲಿ ಮೆ.ಡೆಸಾಲ್ಟ್ ಸಿಸ್ಟಮ್ಸ್ ಮೂಲಕ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಸಾಫ್ಟ್‌ವೇರ್‌ಗಾಗಿ ಮಂಡಳಿಯಿಂದ 18.75 ಕೋಟಿ ಅನುದಾನ ಒದಗಿಸಲಾಗಿದೆ.
- ಕಲಬುರಗಿ ವಿಭಾಗದ ನಲಿ ಕಲಿ ಕಾರ್ಯಕ್ರಮವನ್ನು ಬಲವರ್ಧನೆಗೊಳಿಸಲು ಕಲಬುರಗಿ ವಿಭಾಗದ ಎಲ್ಲಾ ನಲಿಕಲಿ ಕೇಂದ್ರಗಳಿಗೆ ಗ್ರೀನ್ ಬೋರ್ಡ್ ಒದಗಿಸುವ ಕುರಿತು ರೂ. 8.15 ಕೋಟಿ ಅನುದಾನ ಒದಗಿಸಲಾಗುತ್ತಿದೆ.
- ಶೈಕ್ಷಣಿಕವಾಗಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣದಲ್ಲಿ ಭಾಗವಹಿಸಲು ಉತ್ತೇಜಿಸಲು ಟೆಲಿ ಶಿಕ್ಷಣ ಯೋಜನೆ ಅನುಷ್ಠಾನಗೊಳಿಸಲು ಒಟ್ಟು ಇಲ್ಲಿವರೆಗೂ 5.804 ಕೋಟಿ ಅನುದಾನ ಒದಗಿಸಲಾಗಿದೆ.
- ರೂ. 6.00 ಕೋಟಿ ಅನುದಾನದಲ್ಲಿ ಮಾಹಿತಿ ಮತ್ತು ಜೈವಿಕ ವಿಜ್ಞಾನ ತಂತ್ರಜ್ಞಾನ ಇಲಾಖೆಯ ಸಂಯೋಗದಲ್ಲಿ ಶಾಲಾ ಅಂಗಳದಲ್ಲಿ ಸಂಚಾರಿ ತಾರಾಲಯಗಳನ್ನು ನೀಡಲಾಗಿದೆ.
- ಜಯದೇವ ಆಸ್ಪತ್ರೆಗೆ ಕಟ್ಟಡ ನಿರ್ಮಾಣಕ್ಕಾಗಿ ರೂ.4573.77 ಲಕ್ಷ.
- ಮಂಡಳಿಯ 06 ಜಿಲ್ಲೆಗಳಲ್ಲಿ ಒಟ್ಟು 46 ಎಮ್ ವೈ ಘೋರ್ಪಡೆ ಗ್ರಾಮ ಪಂಚಾಯತ ಕಟ್ಟಡಗಳಿಗೆ ರೂ. 2228.00 ಲಕ್ಷಗಳನ್ನು ನೀಡಲಾಗಿದೆ.
- ಅಫಜಲಪೂರ ಸರಕಾರಿ ಪದವಿ ಕಾಲೇಜಿಗೆ ಮೂಲಭೂತ ಸೌಕರ್ಯ ಮತ್ತು ಪಿಠೋಪಕರಣಗಳಿಗೆ ರೂ.248.00 ಲಕ್ಷ
- ಕಲಬುರಗಿ ಜಿಲ್ಲೆಯ 9 ಪಬ್ಲಿಕ್ ಶಾಲೆಗಳ ನವಿಕರಣ ಹಾಗೂ ಹೆಚ್ಚುವರಿ ಅಗತ್ಯಗಳಿಗೆ ರೂ.1700.00 ಲಕ್ಷ
- ಆಳಂದ ತಾಲೂಕಾ ಕ್ರೀಡಾಂಗಣಕ್ಕೆ ವಾಲಿಬಾಲ್, ಕಬಡ್ಡಿ,ಬಾಸ್ಕೆಟ ಬಾಲ್ ಅಂಕಣಗಳ ನಿರ್ಮಾಣಕ್ಕೆ ರೂ.227.48 ಲಕ್ಷ
- ಚಿಂಚೋಳಿ ತಾಲೂಕಿನ ಮುಲ್ಲಾಮರಿ ನದಿಗೆ ಅಡ್ಡಲಾಗಿ ಬಿಸಿಬಿ ನಿರ್ಮಾಣ ರೂ.499 ಲಕ್ಷ.
- ಚಿಂಚೋಳಿ ತಾಲೂಕಿನ ರಟಕಲ್ ಮತ್ತು ಕೋಡ್ಲಿಯಲ್ಲಿ ಬಾಲಕಿಯರ ಪ್ರಿ ಮ್ಯಾಟ್ರಿಕ್ ಹಾಸ್ಟೆಲ್ ಗಳಿಗೆ ರೂ.400.ಲಕ್ಷ
- ಸೇಡಂ ಪಟ್ಟಣದ ಕ್ರೀಡಾಂಗಣಕ್ಕೆ ಗ್ಯಾಲರಿ ರೂ.300.ಲಕ್ಷ
- ರೂ. 200.00 ಲಕ್ಷ ಮೊತ್ತದಲ್ಲಿ ಹುಮನಾಬಾದ ಪಟ್ಟಣದಲ್ಲಿ ಈಜು ಕೊಳ ನಿರ್ಮಾಣ.
- ಹುಮನಾದ ತಾಲೂಕಿನ ಹಳ್ಳಿಖೇಡ ಪಟ್ಟಣದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ರೂ. 308.00 ಲಕ್ಷ ಮೊತ್ತದಲ್ಲಿ ನಿರ್ಮಾಣ
- ಬೀದರ ರಿಂಗ್ ರೋಡ (ವಿಶ್ವ ವಿದ್ಯಾಲಯ ದಿಂದ ಶಹಾಪೂರ ಗೇಟ) ರೂ. 1093.40 ಲಕ್ಷ ನಿರ್ಮಾಣ
- ಔರಾದ ತಾಲೂಕಿನ ಸಂತಪೂರದಲ್ಲಿ ಸಮುದಾಯ ಆರೋಗ್ಯ ಕೇಂದ್ರ ವಿವಿಧ ಕಾಮಗಾರಿಗಳಿಗೆ ರೂ. 340.00 ಲಕ್ಷ.
- ಬಸವಕಲ್ಯಾಣ ತಾಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಸಿಟಿ ಸ್ಕ್ಯಾನ್ ಮತ್ತು ಇತರೆ ಉಪಕರಣಗಳ ರೂ.140.00 ಲಕ್ಷಗಳಲ್ಲಿ ಒದಗಿಸುವುದು.
- ಸುರಪುರ ನಗರಕ್ಕೆ 2ನೆ ಹಂತದ ಕುಡಿಯುವ ನೀರು ಸರಬರಾಜು ರೂ. 373.84 ಲಕ್ಷ ಮೊತ್ತ.
- ಸುರಪುರ ತಾಲೂಕಿನ ಕೆಂಬಾವಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ರೂ. 257.00 ಲಕ್ಷದ ಮೊತ್ತ.

- ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ರೂ. 465.00 ಲಕ್ಷ.
- ಯಾದಗಿರಿ ನಗರದಲ್ಲಿ ಹೈಟೆಕ್ ಟೆಕ್ಸ್‌ಟೈಲ್ ಟ್ರೇನಿಂಗ್ ಸೆಂಟರ ರೂ. 187.50 ಲಕ್ಷ
- ರೂ.400 ಲಕ್ಷ ವೆಚ್ಚದಲ್ಲಿ ಕೊಪ್ಪಳ ನಗರದ ಜಿಲ್ಲಾ ಆಸ್ಪತ್ರೆಗೆ ಮತ್ತು ಮೆಡಿಕಲ್ ಕಾಲೇಜಿಗೆ ಉಪಕರಣಗಳು ಮತ್ತು ಯುಜಿಡಿ ಕಾಮಗಾರಿಗಳು
- ರೂ.105 ಲಕ್ಷ ವೆಚ್ಚದಲಿ ಗಂಗಾವತಿಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ
- ಕುಕುನೂರ ಹಾಗೂ ಯಲಬರ್ಗಾ ತಾಲೂಕಿನ ಕುದರೆಮೋತಿ, ಚಿಕ್ಕನಕೊಪ್ಪ ಮತ್ತು ತೊಂಡಿಹಾಳ ಗ್ರಾಮಗಳಲ್ಲಿ ರೂ.400 ಲಕ್ಷ ವೆಚ್ಚದಲ್ಲಿ ಕೆರೆಗಳ ನಿರ್ಮಾಣ
- ಕುಕುನೂರ ಕೈಗಾರಿಕಾ ಸಂಸ್ಥೆಗೆ ಟೂಲ್ಸ್ ಮತ್ತು ಇಕ್ವಿಪ್‌ಮೆಂಟ್ ಗಳಿಗೆ ರೂ.105 ಲಕ್ಷ ಮಂಜೂರಾತಿ.
- ಕುಷ್ಟಗಿ ತಾಲೂಕ ಕ್ರೀಡಾಂಗಣಕ್ಕೆ ರೂ.150 ಲಕ್ಷ ಮಂಜೂರಾತಿ.
- ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ನರ್ಸಂಗ ವಿದ್ಯಾರ್ಥಿಗಳಿಗೆ ವಸತಿ ನಿಲಯ ಕಟ್ಟಡ ರೂ.300 ಲಕ್ಷ
- ಹರಪನಹಳ್ಳಿಯಲ್ಲಿ ವೈದ್ಯರ ಹಾಗೂ ಶುಶ್ರೂಕಿಯರಿ ಗೆ ವಸತಿಗೃಹಗಳ ನಿಮಾಣ ರೂ.300 ಲಕ್ಷ
- ಸಂಡೂರ ಪಟ್ಟಣದ 100 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಗೆ ಸಿ-ಆರ್ಮ ಮಿಷನ್ ಮತ್ತು
- ಆರ್ಥೋ ಓಟಿ ಸೆಂಟರ್ ರೂ.100 ಲಕ್ಷ.
- ಬಳ್ಳಾರಿ ತಾಲೂಕಿನ ಮಿಂಚೇರಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಪೈಪ್ ಅಳವಡಿಕೆ ರೂ.397 ಲಕ್ಷ.
- ಕೂಡ್ಲಗಿ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ರೂ.317 ಲಕ್ಷ
- ಹಡಗಲಿ ತಾಲೂಕಿನ ಕತ್ತೆಬೆನ್ನೂರ, ಮಾಗಾಳ ಮತ್ತು ಹಡಗಲಿ ಪಟ್ಟಣದಲ್ಲಿ ಹಾಸ್ಟೆಲ್‌ಗಳ ನಿರ್ಮಾಣ ರೂ.650 ಲಕ್ಷ

ಈ ಯೋಜನೆ 2013-14ರಲ್ಲಿ ಪ್ರಾರಂಭವಾಗಿದ್ದು ಅಂದು ರೂ.153.50ಕೋಟಿಗಳು ನಿಗದಿಯಾಗಿದ್ದು ತದನಂತರದಲ್ಲಿ ಪ್ರತಿ ವರ್ಷ ರೂ.1000.00 ದಿಂದ ರೂ.1500.00ಕೋಟಿಗಳನ್ನು ನಿಗದಿಪಡಿಸಿ ಸಮಗ್ರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗುತ್ತಿದ್ದು ಮುಂದಿನ ಸಾಲುಗಳಲ್ಲಿ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾತಿನಿಧ್ಯತೆ ನೀಡಲು ಕ್ರಮವಹಿಸಲಾಗುವುದು.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ